ಕೇಳಿದ್ದಿಲ್ಲ. ನಿಮ್ಮನ್ನು ಸುಮ್ಮನೆ ದೊಡ್ಡ ಲಿಪಿಕಾರ ಅಂತ ಜನ ಹೇಳುತ್ತಿಲ್ಲ."

"ಆಯ್ತು, ಈಗ ಏಳು, ಮನೆಗೆ ಹೋಗು."

ಅಂತೆಯೇ ಯಜಮಾನ ಖುಷಿಯಿಂದ ಮತ್ತೆ ಮತ್ತೆ ವಂದಿಸಿ ತನ್ನ ಮನೆಗೆ ಹೋದ.

★★★

ಒಂದೆರಡು ವರ್ಷಗಳ ನಂತರ ಅವರಿಬ್ಬರೂ ಅದೇ ಸ್ಥಳದಲ್ಲಿ ಆಕಸ್ಮಿಕವಾಗಿ ಭೇಟಿಯಾದರು... ಯಜಮಾನ ಬಹಳ ಇಳಿದುಹೋಗಿದ್ದ. ಅವನ ಮುಖದಲ್ಲಿ ಸಂತೋಷದ ಯಾವ ಕಳೆಯೂ ಇರಲಿಲ್ಲ.

"ಹೇಗಿದ್ದೀ ಯಜಮಾನ, ಚೆನ್ನಾಗಿದ್ದೀಯೋ? ಹೆಂಡತಿ ಮಕ್ಕಳು?"

"ಅವರೆಲ್ಲಾ ಚೆನ್ನಾಗಿಯೇ ಇದ್ದಾರೆ ಸ್ವಾಮಿ."

"ಮತ್ತೆ ನೀನು?"

"ನನಗೆ ಪೆಟ್ಟುಗಳು ಬೀಳುತ್ತಲೇ ಇವೆ. ಆದರೂ ನಾನಿನ್ನೂ ಕಲ್ಲಾಗಿಯೇ ಇದ್ದೇನೆ, ಸ್ವಾಮಿ. ಮೂರ್ತಿಯಾಗಿಲ್ಲ."

"ಏನು ಏನಾಯಿತು?"

"ಏನು ಹೇಳಲಿ? ಯಾಕೆ ಸುಮ್ಮನೆ ಮನೆಯಲ್ಲಿ ಬಿದ್ದುಕೊಂಡಿದ್ದೀಯಾ? ಹೋಗಿ ನಾಲ್ಕು ಕಾಸು ಸಂಪಾದಿಸಬಾರದೇ ಎಂದು ನನ್ನನ್ನು ಭಿಕ್ಷಕ್ಕೆ ಕಳಿಸುತ್ತಿದ್ದಾರೆ, ಮಹಾಸ್ವಾಮಿ!"

---

# ಹೋಟೇಲ್ ಮಿತ್ಸುಬಿಶಿ

"ವೆಲ್ಕಂ ಟು ಹೋಟೇಲ್ ಮಿತ್ಸುಬಿಶಿ, ಸರ್. ವ್ಹಾಟ್ ಕ್ಯಾನ್ ವಿ ಡೂ ಫಾರ್ ಯು?"

"ಮೆನಿ ಥಿಂಗ್ಸ್, ಸದ್ಯಕ್ಕೆ ಒಂದು ರೂಂ."

"ನಿಮ್ ಹೆಸ್ರು?"

"ನೋಡಿ ಈ ಕಾರ್ಡಿನಲ್ಲಿ ಹೆಸರು, ವಿಳಾಸ, ಉದ್ಯೋಗ ಎಲ್ಲಾ ಇದೆ."

"ಸೋಮನಾಥಪುರಂ ಗಣೇಶನ್ ರಾಮನಾಥನ್ ರಂಗನಾಥನ್ ಜಿಪುಣ್ಣರ್?"

"ಚಿಪುಣ್ಣರ್, ಜಿಪುಣ್ಣರ್ ಅಲ್ಲ. ನಾನು ಬಹಳ ಜನರಸ್. ಹೆಸರು ಸ್ವಲ್ಪ ದೊಡ್ಡದಿದೆ, ಅದಕ್ಕೇ ಈ ಕಾರ್ಡ್ ಮಾಡಿಸಿದ್ದೇನೆ."

"ಫೋಟೊ ಐಡಿ? ಆಧಾರ್, ಪ್ಯಾನ್, ಪಾಸ್‌ಪೋರ್ಟ್, ಡ್ರೈವಿಂಗ್ ಲೈಸೆನ್ಸ್, ಮ್ಯಾರೇಜ್ ಸರ್ಟಿಫಿಕೇಟ್ ಇಲ್ಲಾ ಡಿವೋರ್ಸ್?"

"ಡಿವೋರ್ಸ್?"

"ಇದ್ದರೆ ಮಾತ್ರ."

"ಮದುವೇನೇ ಆಗಿಲ್ಲ."

"ಸಾರಿ, ಸರ್!"